ಈ ದಿನ ದಿನಾಂಕಃ 15.10.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ</u>**

10. ನಾನು 7ನೇ ತರಗತಿವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ಸರ್ವೆ ನಂ. 29/3 ಬೋಜರಾಜರವರಿಗೆ ಸೇರಿದ್ದು ಎಂದರೆ ಸರಿ. ಸರ್ವೆ ನಂ. 29/4 ರಲ್ಲಿ ನೆಲ್ಲಹಂಕಲು ಹಾಗೂ ಚಿಕ್ಕಸಂದಿ ಗ್ರಾಮಗಳಿಗೆ ತೆರಳಲು ದಾರಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂ. 29/5 ರಲ್ಲಿ ದಾರಿ ಇದೆ ಎಂದು ನುಡಿಯುತ್ತಾರೆ. ಸರ್ವೆ ನಂ. 29/4 ರಲ್ಲಿ ನೆಲ್ಲಹಂಕಲು ಹಾಗೂ ಚಿಕ್ಕಸಂದಿ ಗ್ರಾಮಗಳಿಗೆ ತೆರಳಲು ದಾರಿ ಇದ್ದರೂ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 29/4ರ ಪೂರ್ವ ದಿಕ್ಕಿಗೆ ವಾದಿಯು ಅನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ. 29/4ರ ಪಶ್ಚಿಮ ದಿಕ್ಕಿಗೆ ನಾನು ಹಾಗೂ ನನ್ನ ತಂದೆ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಸ್ವಾದೀನಲ್ಲಿದ್ದೇನೆ ನನ್ನ ತಂದೆ ಇರುವುದಿಲ್ಲ ಎಂದು ನುಡಿಯುತ್ತಾರೆ.

11. ಸರ್ವೆ ನಂ. 29/4ರ ಚೆಕ್ಕುಬಂದಿ ಪೂರ್ವಕ್ಕೆ ಬೊಜರಾಜ, ಆರ್ಮುಗಂ, ಕಾಶಿ , ಮಣಿ ರವರ ಜಮೀನು, ಪಶ್ಚಿಮಕ್ಕೆ ಮಲ್ಲಿಕಾರ್ಜುನರವರ ಜಮೀನು, ಉತ್ತರಕ್ಕೆ ಲಿಂಗಪ್ಪನವರ ಜಮೀನು ಮತ್ತು ದಕ್ಷಿಣಕ್ಕೆ ಸಕ್ರಾನಾಯ್ಕ ಗಂಗಾಧರವರ ಜಮೀನು ಇರುತ್ತದೆ. ಸರ್ವೆ ನಂ. 29/4 ರ ಜಮೀನಿನ ಪೂರ್ವಕ್ಕೆ ಸರ್ವೆ ನಂ. 29/5 ರ ಜಮೀನು ಇದೆ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ಶಾಂತವೀರಪ್ಪನವರ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಲ್ಲಿಕಾರ್ಜುನರವರ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ.

12. ಮಾಣೀಕ್ಯಂ ನನಗೆ ಅಜ್ಜನಾಗಬೇಕು. ಅವರಿಗೆ 6 ಜನ ಮಕ್ಕಳಿರುತ್ತಾರೆ. ಕಾಶಿ ಮೊದಲನೆ ಮಗ. ಕಾಶಿ ನನ್ನ ತಂದೆ. ವಾದಿಯೊಂದಿಗೆ ನಾನು ಹಾಗೂ ನನ್ನ ತಂದೆ ಸರ್ವೆ ನಂ. 29/4ರ ಜಮೀನನ್ನು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ ನಂ. 29/4 ಹಾಗೂ 29/5ರ ಜಮೀನುಗಳನ್ನು ಕಾಶಿ, ಆರ್ಮುಗಂ ಹಾಗೂ ಮಣಿ ಒಟ್ಟಾಗಿ ಉಳುಮೆ

ಮಾಡುತ್ತಿದ್ದಾರೆ  ಎಂದರೆ ಸರಿಯಲ್ಲ.  ಸರ್ವೆ ನಂ. 29/5ರ ಪೂರ್ವ ದಿಕ್ಕಿಗೆ ಮಣಿ ಅವರ ಸಮಾಧಿ ಇರುತ್ತದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

C/c  2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.